# ಜಾನಪದ ತ್ರಿಪದಿಗಳಲ್ಲಿ ಬಸವಣ್ಣನ ವಿಚಾರಗಳು

ಡಾ. ರಾಜಶೇಖರ ಜಮದಂಡಿ

ಸಂತನೊಬ್ಬನನ್ನು ಜನಪದರು ಹೇಗೆ ಕಾಣುತ್ತಾರೆ? ಅದರಲ್ಲೂ ಸಾಮಾಜಿಕ ಬದಲಾವಣೆಯ ಹರಿಕಾರನೆಂದೇ ಪರಿಗಣಿಸಲ್ಪಟ್ಟ ಬಸವಣ್ಣನವರ ಜೀವನ, ತತ್ತ್ವ, ವಿಚಾರಗಳನ್ನು ಜನಸಾಮಾನ್ಯರು ಹೇಗೆ ಪರಿಭಾವಿಸುತ್ತಾರೆ? ತುಂಬ ಕುತೂಹಲಕಾರಿಯಾದ ಅಂಶವನ್ನು ಕುರಿತು ಇಲ್ಲಿ ಚರ್ಚಿಸಿರುವ ಲೇಖಕರು ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾನಿಲಯದ ಕೊಪ್ಪಳ ಸ್ನಾತಕೋತ್ತರ ಅಧ್ಯಯನ ಸಂಸ್ಥೆಯಲ್ಲಿ ಕನ್ನಡ ಪ್ರಾಧ್ಯಾಪಕರು.



ಜನಪದಕ್ಕೆ ಸಂಬಂಧಿಸಿದ್ದು ಜಾನಪದ. ಜಾನಪದ ಸಾಹಿತ್ಯ ಮಾನವನ ಹುಟ್ಟಿನೊಂದಿಗೆ ಆರಂಭವಾಗಿ ಆತನಲ್ಲಿ ಅವಿನಾಭಾವ ಸಂಬಂಧ ಪಡೆದುಕೊಂಡಿದೆ. ಜಾನಪದ ಎಂಬುದು ಮಾತು, ಕ್ರಿಯೆ, ಅಕ್ಷರಗಳಿಂದ ಅಭಿವ್ಯಕ್ತವಾಗುತ್ತಾ ಬಂದಿದೆ. ಪ್ರಾಚೀನ ಕಾಲದ ಸಂಸ್ಕೃತಿಯ ಅಮೂಲ್ಯವಾದ ಅಂಶಗಳನ್ನು ಅರ್ಥ ಪೂರ್ಣವಾಗಿ ಗರ್ಭೀಕರಿಸಿಕೊಂಡಿರುವಂಥದ್ದೇ ಜಾನಪದ. ಅಂದರೆ ಮೂಲ ಸಾಂಸ್ಕೃತಿಕ ಪಳೆಯುಳಿಕೆಗಳನ್ನು ಜೀವಂತಿಕೆ ಯಾಗಿರಿಸಿಕೊಂಡು, ಅದರೊಳಗೆ ಧಾರ್ಮಿಕ, ವೈಚಾರಿಕ ಹಾಗೂ ವೈಜ್ಞಾನಿಕ ಮನೋಭಾವವನ್ನು ಅಡಗಿಸಿಕೊಂಡಿದೆ. ಕನ್ನಡ ಸಾಹಿತ್ಯ ದಲ್ಲಿ ಜಾನಪದಕ್ಕೆ ವಿಶಿಷ್ಟವಾದ ಮತ್ತು ಮೌಲಿಕವಾದ ಮಹತ್ವವಿದೆ. ಪ್ರಾದೇಶಿಕ ಭಿನ್ನತೆಯಿಂದ ಆಯಾ ದೇಶೀಯ ಭಾಷೆಯಲ್ಲಿ ಜನ ಪದವು ವಾಸ್ತವಿಕತೆಗೆ ತಕ್ಕಂತೆ ರಚನೆಗೊಂಡಿರುವಂಥದ್ದು ಕಾಣ ಬರುತ್ತದೆ. ಸಾಮಾನ್ಯವಾಗಿ ಜಾನಪದ ಎಂದಾಕ್ಷಣ ಅದರ ಲ್ಲಿರುವ ಬೇರೆ ಬೇರೆ ರೀತಿಯ ಹಾಡು, ಕಥೆ, ಗಾದೆ, ಒಗಟು, ಒಡಪು, ಕಲೆ, ಆಟ ಇತ್ಯಾದಿಗಳು ನಮ್ಮ ನೆನಪಿಗೆ ಬರುತ್ತವೆ.

ಜಾನಪದವು ನಿಂತ ನೀರಾಗದೆ ಸದಾ ಹರಿಯುವ ಜೀವನದಿ ಯಾಗಿದೆ. ನಿಃಸ್ವಾರ್ಥ ಮೂಲವಾಗಿ, ಸಂಚಲನೆ ಮತ್ತು ಪರಿವರ್ತನೆ ಯಲ್ಲಿ ಕೊಳ್ಳುಕೊಡೆಯಾಗಿದೆ. ಶಿಷ್ಟಪದ ವಿಜೃಂಭಿಸಿದಾಗಲೆಲ್ಲಾ ಜನಪದವು ಹಿಂದೆ ಸರಿಯದೆ, ತನ್ನ ಅಸ್ತಿತ್ವವನ್ನು ಉಳಿಸಿ-ಬೆಳೆಸಿ ಕೊಳ್ಳುತ್ತಾ ಸಾಗಿದೆ. ಎಂತಹ ನಾಗರಿಕತೆಯ ಸಂದರ್ಭದಲ್ಲೂ ಇದನ್ನು ಪರೋಕ್ಷವಾಗಿ ಗುರುತಿಸಿಕೊಳ್ಳುವ ಮನೋಭಾವ ಕಾಣಬರುತ್ತದೆ. ಇದನ್ನು ನಾವು ಅಂತರಂಗದಿಂದ ಸೂಕ್ಷ್ಮವಾಗಿ ಅರಿಯಬಹುದು. ಇಂತಹ ಜಾನಪದ ಸಾಹಿತ್ಯದ ಅಧ್ಯಯನ ಮತ್ತು ಚರ್ಚೆಯಲ್ಲಿ ತೊಡಗಿದರೆ ಹೊಸ ಹೊಸ ವಿಚಾರಗಳು ಬೆಳಕಿಗೆ ಬರುವುದಲ್ಲದೆ, ಇದರಿಂದ ಮನಸ್ಸಿಗೆ ಒಂದಿಷ್ಟು ಸಂತೋಷ - ಸಂಭ್ರಮಗಳುಂಟಾಗುತ್ತವೆ.

ಬಸವೇಶ್ವರರು ಶಿಷ್ಟ ಕಾವ್ಯಗಳಿಗೆ ವಸ್ತುವಾದಂತೆ ಜನಪದ ಕವಿ, ಕವಯತ್ರಿಯರ ತ್ರಿಪದಿಗಳಿಗೂ ಗ್ರಾಸವಾಗಿದ್ದಾರೆ. ಅದೇ ರೀತಿ ಜನಪದರು ತಮ್ಮ ದುಡಿತದಲ್ಲಾಗಲಿ, ವಿಶ್ರಾಂತಿ ಸಂದರ್ಭ ದಲ್ಲಾಗಲಿ ಅಥವಾ ಸಾಮೂಹಿಕವಾದ ಚರ್ಚೆಯಲ್ಲಿ ತೊಡಗಿ ದಾಗ ತಮಗೆ ಹೊಳೆದ ವಿಷಯಗಳನ್ನು ಕುರಿತು ಮಾತಾನಾಡು ವುದು ಸಹಜ. ಬಸವಣ್ಣನವರ ಆಚಾರ-ವಿಚಾರಗಳನ್ನು ಜನ ಪದರು ತಮ್ಮ ತ್ರಿಪದಿಗಳಲ್ಲಿ ಈ ಕೆಳಗಿನಂತೆ ಕಟ್ಟಿಕೊಟ್ಟಿದ್ದಾರೆ.

* * *

ಬಸವಣ್ಣನವರಲ್ಲಿದ್ದ ಭಕ್ತಿ ಊರ್ಧ್ವಮುಖವಾಗಿದ್ದರೂ ‘ಎನ ಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ’ ಎಂದು ವಿನೀತ ಭಾವ ಹೊಂದಿದವರು. ನುಡಿದಂತೆ ನಡೆದು ತೋರಿದ, ಮಾನವ ಜನಾಂಗಕ್ಕೆ ಪ್ರಿಯನಾದ ಬಸವೇಶ್ವರನನ್ನು ಕುರಿತು ಜನಪದರು ಎದೆಯೊಳಗೆ ಹೀಗೆ ಮಾರ್ಮಿಕವಾಗಿ ನುಡಿಯುತ್ತಾರೆ:

**ಬಸವ ಭಕ್ತಿಯ ಬೀಜ ಬಸವ ಮುಕ್ತಿಯ ತೇಜ**
**ಬಸವ ಕಾಯಕದ ಗುರುಬೀಜ । ಶಿವಮತಕೆ ।**
**ಬಸವ ಓಂಕಾರ ಶಿವನಾಮ ।**

ಬಸವಣ್ಣನವರನ್ನು ನಿತ್ಯ ನೆನೆವುದೇ ಒಂದು ಆನಂದ. ಅವರು ಮಹಾಮೇಧಾವಿಗಳು, ಮಾನವತಾವಾದಿಗಳು, ತ್ರಿಕಾಲಜ್ಞಾನಿ, ಜಗಜ್ಯೋತಿ ಸ್ವರೂಪರಾಗಿದ್ದು, ಆಚಾರ-ವಿಚಾರಗಳಲ್ಲಿ ವಿನಯ ಸಂಪನ್ನರಾಗಿದ್ದರು. ಮುಂದಿನ ದಿನಗಳಲ್ಲಿ ಭಾರತದ ಪರಿಸ್ಥಿತಿ ಹೇಗಿರುತ್ತದೆಂದು ಬಲ್ಲವರಾಗಿದ್ದರೆಂಬುದಕ್ಕೆ ಅವರ ವಚನಗಳೇ ಸಾಕ್ಷಿ. ದೀನದಲಿತರನ್ನು ಕಂಡರೆ ಅವರಿಗೆ ಎಲ್ಲಿಲ್ಲದ ಸಂತೋಷ. 'ತುಂಬಿದುದು ತುಳುಕದು ನೋಡಾ, ನಂಬಿದುದು ಸಂದೇಹಿಸದು ನೋಡಾ, ಒಲಿದುದು ಓಸರಿಸದು ನೋಡಾ, ನೆರೆಯರಿದುದು ಮರೆಯದು ನೋಡಾ ಚೆನ್ನಮಲ್ಲಿಕಾರ್ಜುನಯ್ಯಾ, ನೀನೊಲಿದ ಶರಣಂಗೆ ನಿಸ್ಸೀಮ ಸುಖವಯ್ಯಾ' ಎಂದು ಅಕ್ಕಮಹಾದೇವಿ ಹೇಳಿದಂತೆ ಅಧಿಕಾರ, ಮಹಾಮನೆ, ಸಂಪತ್ತು ಎಲ್ಲವನ್ನೂ ಹೊಂದಿದ್ದ ಬಸವಣ್ಣನವರಲ್ಲಿ ಎಳ್ಳಷ್ಟೂ ಅವುಗಳ ಗತ್ತುಗಳಿರಲಿಲ್ಲ. ಅವರ ಭಾವನೆಯಲ್ಲಿ 'ಮೃದು ವಚನಗಳು ಸಕಲ ಜಪತಪವಷ್ಟೇ ಮೀಸಲಲ್ಲ, ಸದಾಶಿವನೊಲುಮೆಗೆ ಸಾಕ್ಷಿಯೆಂಬುದು' ಗೊತ್ತಿತ್ತು. ಸದಾ ಸಮಾಜಸೇವೆಯ ಚಿಂತನ-ಮಂಥನದಲ್ಲಿ ಬದುಕನ್ನು ಕಟ್ಟಿಕೊಂಡಿದ್ದರು. ಜನಪದರೂ ತಮ್ಮ ಜೀವನದುದ್ದಕ್ಕೂ ಬಸವಣ್ಣನವರಂತೆ ಪ್ರೀತಿ, ವಿಶ್ವಾಸ, ಸರಳತೆ, ತ್ಯಾಗ, ದಯಾಗುಣಗಳನ್ನು ರೂಢಿಸಿಕೊಂಡು ಬಂದಿದ್ದಾರೆ.

ಅಂದಿನ ಕಾಲದಲ್ಲಿ ಕಸುಬುಗಳನ್ನಾಧರಿಸಿದ ಜಾತೀಯತೆ ಅಪಾಯಕಾರಿಯಾಗಿತ್ತು. ಸಾಮಾಜಿಕ ಸ್ಥಾನಮಾನಗಳ ದೃಷ್ಟಿಯಲ್ಲಿ ಕಸುಬಿನಿಂದ ಕಸುಬಿಗೆ ಅಸಾಧಾರಣವಾದ ಅಂತರವಿತ್ತು. ಬೆವರು ಸುರಿಸುವವ ಶೂದ್ರನೆಂದು, ಬೆವರು ಸುರಿಸದವ ಪುರೋಹಿತನೆಂಬ ವೃತ್ತಿಬಂಧ ಮತ್ತು ಅಸಮಾನತೆ ಮನೆಮಾಡಿತ್ತು. ಉತ್ಪತ್ತಿಯ ದೃಷ್ಟಿಯಿಂದ ಶ್ರಮವಿಭಜನೆ ಅನಿವಾರ್ಯವಾದರೂ ಸಹಭೋಜನ, ಸಹಜೀವನ, ಸಹವಾಸ, ಸಮಾಗಮಗಳಿಗೆ ಅವಕಾಶವಿರದ ಕಸುಬುಗಳ ವಿಭಜನೆಯನ್ನು ಜನಪದರು ಖಂಡಿಸಿದರು. ಜ್ಞಾನದ ಬೆಳಕಿನಲ್ಲಿ ಭಕ್ತಿಪೂರ್ವಕವಾಗಿ ಏಕಾಗ್ರತೆಯಿಂದ ಮಾಡುವ ಕ್ರಿಯೆಗಳೇ ನಿಜವಾದ ಕಾಯಕ. ವೈಯಕ್ತಿಕತೆಗಿಂತ ಸಮಾಜವನ್ನು ಸುಸ್ಥಿತಿಯಲ್ಲಿಡುವುದೇ ಬದುಕಿನ ಮೂಲಮಂತ್ರ ಎಂಬ ಧೋರಣೆ ಜನಪದರಲ್ಲಿ ಕಾಣುತ್ತೇವೆ.

**ಕಾಯಕವೇ ಶಿವಭಕ್ತಿ ಕಾಯಕವೇ ಶಿವಭಜನೆ**
**ಕಾಯಕವೆ ಲಿಂಗ ಶಿವಪೂಜೆ । ಶಿವಯೋಗ ।**
**ಕಾಯಕವೇ ಕಾಯ್ದು ಕೈಲಾಸ ॥**

ಬಸವಣ್ಣನವರಲ್ಲಿದ್ದ ಕಾಯಕದ ಪರಿಕಲ್ಪನೆ ಅನನ್ಯವಾದುದು. ಕಾಯಕ ಮಾಡದ ವ್ಯಕ್ತಿ ಸಮಾಜಕ್ಕೆ ಹೊರೆ ಮತ್ತು ಅಧ್ಯಾತ್ಮ ಸಾಧನೆಗೆ ಅನರ್ಹನೆಂಬುದಾಗಿತ್ತು. ಗಳಿಕೆಗೆ ಬೇಕಾದ ಕಾಯಕದಂತೆ ಸದ್ಬಳಕೆಗೆ ನೆರವಾದುದು ದಾಸೋಹ. ಯಾವ ವ್ಯಕ್ತಿಯೇ ಆಗಲಿ ತನ್ನ ವೈಯಕ್ತಿಕ ಆಶೋತ್ತರಗಳ ಪೂರೈಕೆಯೊಂದಿಗೆ ಸಮಾಜಕ್ಕೆ ಸಲ್ಲಿಸಬೇಕಾದ ಕರ್ತವ್ಯವನ್ನು ಕಾಯಕದ ಮೂಲಕ ರೂಪಿಸಿಕೊಳ್ಳುವುದಾಗಿದೆ. ಸಮಾಜದಲ್ಲಿ ಆರ್ಥಿಕ ಸಮಾನತೆಗೆ ಮತ್ತು ಮನುಷ್ಯನ ಅಹಂಕಾರ ನಿರಶನಕ್ಕೆ ಬಸವಣ್ಣನವರು ರೂಪಿಸಿದ್ದ ಕಾಯಕ-ದಾಸೋಹದ ತತ್ವಗಳು ಒಂದೇ ನಾಣ್ಯದ ಎರಡು ಮುಖಗಳಾಗಿವೆ. ವ್ಯಕ್ತಿ ಸಮಾಜಗಳ ನಡುವಣ ಸಂಬಂಧ ಗಟ್ಟಿತನಕ್ಕಾಗಿ ಕಾಯಕ-ದಾಸೋಹಗಳು ಪೂರಕವಾಗಿವೆ. ಕಾಯಕದಲ್ಲಿ ಭಿನ್ನ-ಭೇದಗಳಿಲ್ಲದೆ ಸಕಲರೂ ದುಡಿಯಬೇಕು.

ಹೀಗೆ ಕಾಯಕದಲ್ಲಿ ತಾರತಮ್ಯಗಳನ್ನು ತೊಡೆದು ಹಾಕುವ ಜವಾಬ್ದಾರಿ ಬಸವಾದಿ ಪ್ರಮಥರಲ್ಲಿತ್ತು. ಕೆಲವೊಮ್ಮೆ ಲಿಂಗಧಾರಿಯಾದ ಶರಣನೊಬ್ಬ ಬಸವಣ್ಣನ ಮನೆಗೆ ಬಂದಾಗ, 'ದೇವ ಸಹಿತ ಭಕ್ತ ಮನೆಗೆ ಬಂದರೆ ಕಾಯಕವಾವುದೆಂದು ಬೆಸಗೊಂಡೆನಾದಡೆ ನಿಮ್ಮಾಣೆ ತಲೆದಂಡ ತಲೆದಂಡ' ಅಂದರೆ ಅವರವರ ಕಾಯಕ ಅವರವರಿಗೆ ಶ್ರೇಷ್ಠ. ಅದನ್ನು ಪ್ರಶ್ನಿಸಿ ಆ ಮೂಲಕ ಜಾತಿ ಲೆಕ್ಕಾಚಾರ ಹಾಕುವುದು ತಪ್ಪೆಂಬುದು ಬಸವಣ್ಣ ನವರ ಅಭಿಪ್ರಾಯ. ಇವರ ಕಾಯಕ-ದಾಸೋಹದ ಮಂತ್ರ ಅಂದು ಇಡೀ ದೇಶದ ತುಂಬಾ ಎಷ್ಟೆಲ್ಲಾ ಮೊಳಗಿತ್ತೆಂಬುದಕ್ಕೆ ಕಾಶ್ಮೀರದ ದಂಪತಿಗಳು ಕಲ್ಯಾಣಕ್ಕೆ ಬಂದಿರುವುದನ್ನು ನೆನಪಿಸಿಕೊಳ್ಳಬಹುದು.

ಅದೇ ರೀತಿ ಯಾಗ, ಯಜ್ಞ, ಯೋಗಗಳನ್ನರಿಯದ ಜನಪದರಿಗೆ ದೇಹಶ್ರಮವೊಂದೇ ಗೊತ್ತು. ತಮ್ಮ ಪಾಲಿಗೆ ಬಂದ ಕಾಯಕಕ್ಕೆ ಶರಣು ಅರ್ಪಿಸಿಕೊಂಡವರು. ಜನಪದರು ಇಂತಹ ಹಿನ್ನೆಲೆಯಲ್ಲಿ ತಮ್ಮ ದುಡಿತದಿಂದ ಬಂದ ಪಾಲನ್ನು ಹಂಚಿ ತಿನ್ನುವ ಸಂಭ್ರಮ ಕಂಡುಕೊಂಡವರು. ಬದುಕಿನುದ್ದಕ್ಕೂ ಮಹಾದಾನಿಯಾಗಿ 'ಭಗವಂತ ಕೊಟ್ಟಾಗ ಮನುಷ್ಯರೂಪದ ಅವನಿಗೆ ಮತ್ತೆ ನೀಡಿ ಧನ್ಯತೆ ಅನುಭವಿಸುವುದಷ್ಟೇ ನಮ್ಮ ಕರ್ತವ್ಯ' ಎಂಬುದು ಮನದಾಳದ ಮಾತು. ಕಾಯಕದಲ್ಲಿಯೇ ಶಿವಪೂಜೆ, ಶಿವಭಜನೆ, ಶಿವತತ್ವಾಚರಣೆ ಕಂಡುಕೊಂಡ ಜನಪದರು,

**ಕಡೆಯ ಬಲಕಿನ ತಾಳ ಎಡೆಯಾಯ್ತು ಅರಸನಿಗೆ**
**ಎಡಗಡೆಯ ತಾಳ ಪಶುಪಕ್ಷಿಗೆ । ಜೀವನಕೆ ।**
**ನಡುವಿನ ತಾಳ ರೈತನಿಗೆ ॥**

ಪ್ರಕೃತಿ ಪ್ರತಿ ಜೀವಿಗೂ ಮಳೆ, ಗಾಳಿ, ಆಹಾರ, ಬೆಳಕು ಕೊಡುತ್ತಲೇ ಇದೆ. ಪ್ರಕೃತಿಯ ಮಡಿಲಲ್ಲಿರುವ ಜನಪದರು ತಾವೂ ಬೆಳೆದ ದವಸ-ಧಾನ್ಯಗಳನ್ನು ರಾಶಿ ಮಾಡಿದ ಸಂದರ್ಭದಲ್ಲಿ ಸಂತೋಷದಿಂದ ಮೇಲಿನಂತೆ ಹಂಚುವುದುಂಟು. ತಾವು ತಮ್ಮ ಹೊಲದಲ್ಲಿ ನಿಷ್ಠೆಯಿಂದ ಬೆವರು ಸುರಿಸಿ ಬೆಳೆದ ದವಸ-ಧಾನ್ಯಗಳನ್ನು ರಾಶಿ ಮಾಡಿ, ಅದರಲ್ಲಿ ಮೂರು ಭಾಗಗಳನ್ನು ಮಾಡುವರು. ಒಂದನೆಯದು ಅರಸನಿಗೆ ಕಂದಾಯ ರೂಪ

ದಲ್ಲಿ, ಎರಡನೆಯದು ವರ್ಷದುದ್ದಕ್ಕೂ ಪಶುಪಕ್ಷಿಗಳಿಗೆ, ಮೂರನೆಯದು ತನ್ನ ಸಂಸಾರಕ್ಕೆ ಮೀಸಲಾಗಿರಿಸಿಕೊಂಡವರು.

ಹೀಗೆ ಕೆರೆಯ ನೀರನ್ನು ಕೆರೆಗೆ ಚೆಲ್ಲಿ ಮತ್ತೆ ವರವ ಬೇಡುತ್ತಾ 'ಇವನಾರವ ಇವನಾರವ ಎನ್ನದೆ ಇವ ನಮ್ಮವ ಇವ ನಮ್ಮವ ಎನ್ನುವ' ತನ್ನಂತೆ ಪರರನ್ನು ಕಾಣುವ ವಿಶಾಲ ಮನೋಭಾವದವರು. ತಮಗೆ ದಕ್ಕಿದ್ದ ವಸ್ತು ವಿಷಯವನ್ನು ನಾಲ್ಕು ಜನರಲ್ಲಿ ಹಂಚಿಕೊಂಡು ಖುಷಿಪಡುವ ಮನೋವೃತ್ತಿ ಮೆಚ್ಚುವಂಥದ್ದು. ಬಸವಣ್ಣನವರು ಹೇಳಿದಂತೆ 'ಆಡಿದಡೇನು, ಹಾಡಿದಡೇನು, ಓದಿದಡೇನು, ತ್ರಿವಿಧ ದಾಸೋಹವಿಲ್ಲದನ್ನಕ್ಕ?' 'ತನುವಿನಲ್ಲಿ ಸೇವೆ, ಮನದಲ್ಲಿ ನೆನಹು, ಧನದಲ್ಲಿ ತ್ಯಾಗ'ದ ಗುಣಗಳನ್ನು ಅಳವಡಿಸಿಕೊಳ್ಳುವುದೇ ದಾಸೋಹದ ರಹಸ್ಯವಾಗಿದೆ. ದಾಸೋಹವೆಂಬುದು ಕೇವಲ ಮನೆಗೆ ಬಂದವರಿಗೆ ನೀಡುವಂಥದ್ದಲ್ಲ. ಹಸಿದವರನ್ನು, ನಿರ್ಗತಿಕರನ್ನು ಹುಡುಕಿಕೊಂಡು ಸ್ವತಃ ಅವರ ಮನೆಗೆ ಹೋಗಿ ದಾಸೋಹ ಸೇವೆ ಮಾಡುವುದು ಬಸವಣ್ಣನವರ ಅಪೇಕ್ಷೆಯಾಗಿತ್ತು.

ಹರಿವ ನೀರು, ಬೀಸುವ ಗಾಳಿ, ಉರಿವ ಸೂರ್ಯ, ಹೊತ್ತಿರುವ ಭೂಮಿ, ಮಿನುಗುವ ನಕ್ಷತ್ರ ಮುಂತಾದವುಗಳೆಲ್ಲ ಎಂದಾದರೂ ಬೇಸರಿಸಿಕೊಂಡಿವೆಯೆ? ಆದ್ದರಿಂದ ಗಾಳಿ, ನೀರು, ಆಹಾರವನ್ನು ಸಮಯಕ್ಕೆ ಸರಿಯಾಗಿ ಸವಿಯುವ ನಾವು ಕಾಯಕ ಮಾಡುವುದಕ್ಕೆ ಬೇಸರಪಟ್ಟುಕೊಳ್ಳುವುದೇಕೆ? ಎಂಬ ಪ್ರಶ್ನೆ ಜನಪದರದ್ದಾಗಿದೆ. ಶ್ರಮದಲ್ಲಿ ಸಿರಿಯನ್ನು, ಕಾಯಕದಲ್ಲಿ ಕೈಲಾಸವನ್ನು, ಗಳಿಕೆಯಲ್ಲಿ ದಾನವನ್ನು ಕಂಡುಕೊಳ್ಳುವ ಸಂಸ್ಕೃತಿಯನ್ನು ಜನಪದರಲ್ಲಿ ಕಾಣುತ್ತೇವೆ.

**ಕಾಯಕವ ಕಲಿಸುದಕ ನಾಯಕನು ಬಸವಯ್ಯ**
**ಜೀಯ ಹೊಸ ಮತಕೆ ಶಿವಭಕ್ತಿ । ಸಾರುದಕೆ ।**
**ರಾಯ ಜೀವನದ ಹೊಸ ನುಡಿಗೆ ।**

ಸತ್ಯಶುದ್ಧ ಭಾವದಿಂದ ಮಾಡುವ ಉದ್ಯೋಗಕ್ಕೆ ಅಥವಾ ತನುಮನ ಬಳಲಿಸುವ ದುಡಿಮೆಗೆ ಮಹೋನ್ನತ ಕರ್ಮತತ್ತ್ವ ಪದವಿ ನೀಡಿದವರು. ದುಡಿಮೆಗೆ ಹೊಸ ಭಾಷ್ಯ ಬರೆದು ಕೈಲಾಸದ ಭಾವನೆಯನ್ನು ತಂದವರು ಮಹಾಶರಣರು. ಬಸವಣ್ಣನವರು ತಮ್ಮ ವಚನವೊಂದರಲ್ಲಿ ಭಕ್ತಿ ದಾಸೋಹ, ಯುಕ್ತ ದಾಸೋಹ ಮತ್ತು ಐಕ್ಯ ದಾಸೋಹ ಹೀಗೆ ಮೂರು ರೀತಿಯ ದಾಸೋಹದ ಬಗೆಗೆ ಹೇಳಿದ್ದಾರೆ. ನಿಸ್ವಾರ್ಥದಿಂದ ಅರ್ಪಿಸಿಕೊಳ್ಳುವ ಮನೋಭಾವವುಳ್ಳ ಜನಪದರು ಸಹ ಯಾವ 'ಬೇಕು'ಗಳಿಗೆ ಆಸೆಪಡುವಂತವರಲ್ಲ. ಆದರೆ ದಾಸೋಹದ ವಿಚಾರದಲ್ಲಿ ಅನ್ಯಮನಸ್ಕರಾಗದೆ ಶುದ್ಧ ಮನಸ್ಥಿತಿಯಿಂದ ಅರ್ಪಿಸುವಲ್ಲಿ ಅದನ್ನು ಬಹಿರಂಗಪಡಿಸುವ ಮಾತೇ ಇಲ್ಲ. ಕೇವಲ ಕೀರ್ತಿ-ಪ್ರತಿಷ್ಠೆಗಾಗಿ ಅಥವಾ ಇತರರು ಹೊಗಳಲೆಂದು ಮಾಡುವ ದಾಸೋಹ ಅವರಿಗೆ ಬೇಕಿಲ್ಲ. ತಾವೇ ಮನಃಪೂರ್ವಕವಾಗಿ ಅಪ್ಪಿಒಪ್ಪಿಕೊಂಡ ಬಸವಣ್ಣನವರ ದಾಸೋಹದ ವಿಚಾರವನ್ನು ಅತ್ಯಂತ ಹೃದಯತುಂಬಿ ಹಾಡುತ್ತಾ:

**ದಾಸೋಹಿ ಬಸವಣ್ಣ ದಾಸೋಹ ಕಲಿಸಿದವನು**
**ದೇಶ ದೇಶೆಲ್ಲ ಕೇಳುತ । ಹೊಸಮಾತ ।**
**ಮಾಸಿದವು ವೇದ ಹುಸಿಯೆಂದು ।।**

ಇದ್ದವರು ಇಲ್ಲದವರಿಗೆ ದಾಸೋಹ (ದಾನವನ್ನು) ನೀಡುವಲ್ಲಿ ಅನುಕಂಪವಿರುತ್ತದೆ. 'ನೀಡುವವ ಭಕ್ತ ನೀಡಿಸಿಕೊಳ್ಳುವವ ಭಗವಂತ' ಎಂಬ ಉನ್ನತ ಭಾವ ಇದರಲ್ಲಿದೆ. ಸಮಾಜ ವಿಜ್ಞಾನಿಯಾದ ಬಸವಣ್ಣನವರು 'ನೆಲನನಗೆದು ಮಡುಗದಿರಾ ನೆಲನುಂಗಿದಡುಗುಳುವುದೆ? ಧನವಿರಿಸಿದಿರಾ, ಧನವನಿರಿಸಿದರೆ ಭವ ಬಪ್ಪುದು-ತಪ್ಪದು, ಕೂಡಲಸಂಗನ ಶರಣರಿಗೆ ಒಡನೆ ಸವೆಸು' ಎಂದು ಎಚ್ಚರಿಸಿದವರು. ಅಂದರೆ ಸಂಗ್ರಹವೆಂಬುದು ಅನಾಚಾರಕ್ಕೆಳಸಿದರೆ ದಾಸೋಹವೆಂಬುದು ಸದಾಚಾರಿಯನ್ನಾಗಿಸುತ್ತದೆ. ದಾಸೋಹ ದಯೆಯಲ್ಲ ಮಾಡಲೇಬೇಕಾದ ಕರ್ತವ್ಯವಾಗಿರುವುದು. 'ಕೊಟ್ಟಿದ್ದು ತನಗೆ ಬಚ್ಚಿಟ್ಟಿದ್ದು ಪರರಿಗೆ, ಕೊಟ್ಟಿದ್ದು ಕೆಟ್ಟಿತ್ತೆಂದೆನಬೇಡ, ಮುಂದೆ ಕಟ್ಟಿಹುದು ಬುತ್ತಿ' ಎಂದು ಸರ್ವಜ್ಞನೂ ಹೇಳಿದಂತೆ ನಾವು ಮತ್ತೊಬ್ಬರಿಗೆ ನೀಡಿದರೆ ನಮಗೆ ನಮ್ಮ ಕಷ್ಟ ಕಾಲದಲ್ಲಿ ಭಗವಂತ ಆಶೀರ್ವಾದ ನೀಡುತ್ತಾನೆಂದು ಮಾತಾಡುವುದನ್ನು ಜನಪದರಲ್ಲಿ ಕೇಳುತ್ತೇವೆ.

ನಿಸ್ವಾರ್ಥ ಗುಣಕ್ಕೆ ಸಹಜವಾಗಿ ಕಾಣಬರುವ ಮರಗಿಡಬಳ್ಳಿಗಳು ಸದಾ ಋಣಭಾರ ಮುಕ್ತವಾಗಿರುತ್ತವೆ. ಅವುಗಳಿಗೆ ನಾವು ಕಾಲಕಾಲಕ್ಕೆ ನೀರು ಗೊಬ್ಬರವಷ್ಟೇ ಹಾಕಿದರೆ ಅವು ಪ್ರಕೃತಿಯ ಮಡಿಲಲ್ಲಿ ನಗುನಗುತ್ತಾ ನಮಗೆ ಹೂ, ಕಾಯಿ, ಹಣ್ಣುಗಳನ್ನು ಕೊಟ್ಟು ಸಂತೋಷಪಡಿಸುತ್ತವೆ. ಇವುಗಳಿಂದ ಕಲಿತುಕೊಂಡ ನಮ್ಮ ಜನಪದರು ಆ ಮರಗಿಡಬಳ್ಳಿಗಿಂತ ಕಡೆಯಾಗಬಾರದೆಂಬ ಆಲೋಚನೆ ಮಾಡಿದವರು. ತಮಗೆ ಪರಂಪರೆಯಿಂದ ಬಂದ ಕಾಯಕವನ್ನಾಗಲಿ ಅಥವಾ ಆಯ್ದುಕೊಂಡ ಕಾಯಕವನ್ನು ನಿಷ್ಠೆ ನಿಯಮ ಪ್ರಾಮಾಣಿಕತೆಯಿಂದ ನಿರ್ವಹಿಸುತ್ತಾ ಬಂದವರು. ಈ ಸಂದರ್ಭದಲ್ಲಿ ಯಾರೂ ಯಾರ ಋಣಭಾರವನ್ನು ಇಟ್ಟುಕೊಂಡು ಹೋಗಬಾರದು. ಅಷ್ಟೇ ಅಲ್ಲ, ತನುಮುಟ್ಟಿ ಮನಮುಟ್ಟಿ ಸೇವೆ ಸಲ್ಲಿಸುವ ಅವರ ಪರಿ ಸರ್ವಶ್ರೇಷ್ಠವಾದುದು.

* * *

೧೨ನೇ ಶತಮಾನದಲ್ಲಿ ಜಾತಿವ್ಯವಸ್ಥೆ ಎಷ್ಟಿತ್ತೆಂದರೆ ಸತ್ತ ಪ್ರಾಣಿಗಳನ್ನು ಎತ್ತಿ ಹಾಕುವ ಜನಾಂಗವನ್ನು ಊರಿನಿಂದ ದೂರ ವಿಟ್ಟಿತ್ತು. ಅವರನ್ನು ಅಸ್ಪೃಶ್ಯರೆಂದು ಗುರುತಿಸಿ ಸೌಲಭ್ಯಗಳಿಂದ ವಂಚಿಸಲಾಗಿತ್ತು. ಎಲ್ಲ ಜಾತಿ ಮತಗಳನ್ನು ತೊಡೆದು ಸರ್ವ ಸಮಾನತೆಯ ಆಧಾರದ ಮೇಲೆ ಉತ್ತಮ ಸಮಾಜವನ್ನು ನಿರ್ಮಿಸುವಲ್ಲಿ, ಬಸವಣ್ಣನವರಷ್ಟು ಮುನ್ನಡೆ ಸಾಧಿಸಿದವರು ಭಾರತದ ಇತಿಹಾಸದಲ್ಲಿ ವಿರಳವೆನ್ನಬಹುದು. ಹುಟ್ಟುವಾಗ ಪ್ರತಿ

ಯೊಬ್ಬರೂ ಹೊಲೆಯಲ್ಲಿಯೇ ಹುಟ್ಟುವುದು. 'ಹೊಲೆಯೊಳಗೆ ಹುಟ್ಟಿ ಕುಲವನರಸುವರೆ?' ಅನಂತರ ನಾವು ಶ್ರೇಷ್ಠ-ಕನಿಷ್ಠ ಎಂಬೀ ತಾರತಮ್ಯ ಭಾವನೆ ಸೃಷ್ಟಿಸಿಕೊಳ್ಳುತ್ತೇವೆ. ಈ ಮನೋ ಭಾವದವರನ್ನು ಕಂಡ ಬಸವಣ್ಣನವರು ತೀವ್ರ ವಿಡಂಬಿಸಿದ್ದಾರೆ. 'ಮಾಡುವ ಕಾಯಕದಲ್ಲಿ ಹೊಲೆಯತನವಿರುವುದಿಲ್ಲ'ವೆಂದ ಬಸವಣ್ಣನವರು 'ಸತ್ತುದನೆಳೆವರೆತ್ತಣ ಹೊಲೆಯ?' ಎನ್ನುತ್ತಾ

**ಕೊಲ್ಲುವವನೇ ಮಾದಿಗ ಹೊಲಸು ತಿಂಬುವವನೇ ಹೊಲೆಯ**
**ಕುಲವೇನೋ ಆವಂದಿರ ಕುಲವೇನೋ**

ಎಂದು ಪ್ರಶ್ನಿಸುತ್ತಾ ಜೀವಂತಿಕೆಯ ಹೋತವನ್ನು ತಂದು ಹಿಂಸಿಸಿ ಯಜ್ಞದಲ್ಲಿ ಕೊಲ್ಲುವವರೇ ಹೊಲೆಯರು. ಯಾರು ಬಾಯಿಚಟ್ಟಿಗಾಗಿ ಪ್ರಾಣಿ-ಪಕ್ಷಿಗಳನ್ನು ಕೊಲ್ಲುತ್ತಾರೆಯೋ ಅವರೇ ಹೊಲೆಯರು. ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವರೆಲ್ಲ ಕುಲಜರು. ಉದಾತ್ತ ಜೀವನಕ್ಕೆ ಬೇಕಾಗಿರುವುದು ಇಂಥ ಕೀಳು ಆಲೋಚನೆಗಳಲ್ಲ, ಉನ್ನತ ನೈತಿಕ ಮೌಲ್ಯಗಳು ಮುಖ್ಯ. ಹಾಗಾಗಿ ಬಸವಣ್ಣನವರು 'ಹೊಲೆಯ ಮಾದಿಗ ಭಕ್ತನಾದಡೆ ಆತನ ಮನೆಯ ಸೊಣಗಂಗೆ ಪಂಚಮಹಾವಾದ್ಯದಲ್ಲಿ ಸನ್ಮಾನವ ಮಾಡೆನೆ?' ಎಂದಿರುವುದು. ಯಾರು ಅಹಿಂಸಾ ಮೂಲವಾದ ಸಾತ್ವಿಕ ಭಕ್ತಿಯನ್ನು ಕೈಗೊಂಡಿರುತ್ತಾರೋ ಅವರೇ ಉತ್ತಮರು. ಅಂತವರು ಯಾವ ಜಾತಿಯಲ್ಲಿದ್ದರೂ ನಿಜವಾಗಿ ಶರಣರಾಗಿರುತ್ತಾರೆ.

ಅದೇರೀತಿ ಜನಪದರಲ್ಲಿ ಜಾತಿ ಮತದ ಕಲ್ಪನೆಗಳಿಲ್ಲ. ಜನಪದರೂ ಬಸವಣ್ಣನವರ ಈ ಹೊಲೆಯತನ ಕುರಿತಾಗಿ ವ್ಯಕ್ತಪಡಿಸಿದ ವಿಚಾರಕ್ಕೆ ಸ್ಪಂದಿಸಿದ್ದಾರೆ.

**ಹೊಲೆಯ ಮಾದಿಗರೆಂಬ ಬಲೆಯಾತ ಕಿತ್ತೊಗೆದ**
**ಭಲಿರೆ ಬಸವಯ್ಯ ಬಸವರಸ । ನಿನ್ಹೆಸರು ।**
**ನೆಲೆಯಾತು ನಿತ್ಯ ಜನಪದಕೆ ॥**

**ಹೊಲಸು ತಿಂಬುವ ಹೊಲೆಯ ಹೊಲಬಿಲ್ಲವ ಹೊಲೆಯ**
**ನೆಲೆಸಲ್ಲುಸಿನುಡಿಯು ಎದೆಯೊಳಗೆ । ಹೊಲೆಯರಸ ।**
**ಹೊಲೆಯರೆನ್ನುವರೇ ಶರಣರಿಗೆ ॥**

ಹಿಂದೆ ಮನುಷ್ಯ ಯಾವದೋ ಸಂದರ್ಭದಲ್ಲಿ ಕಾಯಕಕ್ಕನುಗುಣವಾಗಿ ಜಾತಿಯನ್ನು ಕಲ್ಪಿಸಿಕೊಂಡಿರಬಹುದು. ಇದರಿಂದ ಶ್ರೇಷ್ಠ-ಕನಿಷ್ಠವೆಂಬ ಮಾಪನದಿಂದ ಅಳೆದರೆ ಮೂರ್ಖತನವಾದೀತು. ಹುಟ್ಟುವಾಗ ಮಾನವರೆಲ್ಲರೂ ಒಂದೇ ವಿನಃ ಹೊಲೆಯ ಎಂಬುದೇ ಇಲ್ಲ. ಇದು ಶರಣರ ಗಟ್ಟಿ ನಿಲುವು. ಹೊಲೆಯತನವನ್ನಳಿಸಿ ಹಾಕಿದ ಶರಣರನ್ನು ಜನಪದರು ಮನಃಪೂರ್ವಕವಾಗಿ ಕೊಂಡಾಡಿದ್ದಾರೆ.

ಜಾತಿಯೆಂಬುದು ಮನಸ್ಸಿಗಂಟಿದ್ದೇ ಹೊರತು ಮೈಗಂಟಿದ್ದಲ್ಲವೆಂಬುದು ಜನಪದರ ಭಾವನೆ. ಬಸವಾದಿ ಪ್ರಮಥರ ಅನುಭಾವವನ್ನು ಅರಿಯುವುದರ ಮೂಲಕ ಅಶುದ್ಧ ಮನಸ್ಸನ್ನು ಶುದ್ಧಗೊಳಿಸಿಕೊಳ್ಳುವುದು. ದೇಹದ ಮೈಲಿಗೆ ತೊಳೆಯಲು ತಿಳಿಯಾದ ನೀರು ಹೇಗೋ ಮನದ ಮೈಲಿಗೆಯನ್ನು ತೊಳೆಯಲು ಭಗವಂತನ ಧ್ಯಾನ ಉಂಟು. ಬಸವಣ್ಣನವರು ಸಮಾಜದಲ್ಲಿ ಸಕಲರೂ ಸಮಾನರಾಗಿರಬೇಕೆಂದು ಎಲ್ಲರಿಗೂ ಲಿಂಗವನ್ನು ಕಟ್ಟಿದರು. ಹೀಗೆ ಲಿಂಗಪೂಜೆಯ ಮೂಲಕ ಜಾತಿ ನಿರ್ಮೂಲನೆ ಮಾಡಲು ಬಸವಣ್ಣನವರು ಅದನ್ನು ಒಂದು ಮಂತ್ರದಂತೆ ಹರಡಿದರು.

ಬಸವಣ್ಣನವರ ಜಾತಿ ಹೋಗಲಾಡಿಸುವ ಕಾರ್ಯವೈಖರಿ ಜನಪದರಲ್ಲಿ ಇಮ್ಮಡಿ ಸಂತೋಷವನ್ನುಂಟುಮಾಡಿದೆ. ಹಾಗಾಗಿ ಆತನನ್ನು ಹೊಗಳುತ್ತಾ, 'ಭೂಮಂಡಲದಲ್ಲಿ ಬಸವಣ್ಣ ನಿನ್ನ ಹೆಸರೇ ಒಂದು ಮಹಾಮಂತ್ರವಾಗಿದೆ' ಎಂದು ಜನಪದರು ತ್ರಿಪದಿಯೊಂದರಲ್ಲಿ ಹೀಗೆ ಹಾಡಿದ್ದಾರೆ.

**ಉತ್ತಿ ಬಿತ್ತುವ ಮಂತ್ರ ಬಿತ್ತಿ ಬೆಳೆಯುವ ಮಂತ್ರ**
**ಸತ್ಯ ಶಿವಮಂತ್ರ ನಿನ್ಹೆಸರು । ಬಸವಯ್ಯ।**
**ಮರ್ತ್ಯದೊಳು ಮಂತ್ರ ಜೀವನಕೆ ॥**

ಮಾನವ ಜನ್ಮದ ಸಾರ್ಥಕತೆಯನ್ನು ಅನುಭವಿಸಿದ ಬಸವಣ್ಣನವರು ತಮ್ಮ ಸಮಕಾಲೀನ ಹಾಗೂ ಅನಂತರದ ವಿಚಾರವಂತರಿಗೆ ಮಾರ್ಗದರ್ಶಿಯಾಗಿದ್ದಾರೆ. ಅವರ ವಚನಗಳು ಪ್ರಚಲಿತ ವಿದ್ಯಮಾನಗಳಿಗೆ ಕನ್ನಡಿಯಾಗಿವೆ. ಹಾಗಾಗಿ,

**ಎಲ್ಲ ಬಲ್ಲಿದನಯ್ಯ ಕಲ್ಯಾಣ ಬಸವಯ್ಯ**
**ಚೆಲ್ಲಿದನು ತಂದು ಶಿವ ಬೆಳಕ । ನಾಡೊಳಗೆ ।**
**ಸೊಲ್ಲೆತ್ತಿ ಜನವು ಹಾಡುವುದು ॥**

ಹೀಗೆ ಜನಪದರು ಮನದುಂಬಿ ಹಾಡಿ ಹೊಗಳಿದ್ದಾರೆ. ಮೂಢನಂಬಿಕೆ, ಅಸಮಾನತೆ, ಕಂದಾಚಾರ, ಅಸ್ಪೃಶ್ಯತೆಗಳೆಂಬ ಅನಿಷ್ಟಗಳ ವಿರುದ್ಧ ಬಸವಣ್ಣನವರು ತಮ್ಮ ವಯಸ್ಸಿಗೂ ಮೀರಿ ಹೋರಾಡಿದವರು. ಅಂದಿನ ಕಾಲದಲ್ಲಿಯೇ ಭಾವೀ ಭಾರತದ ಕನಸನ್ನು ಕಂಡವರು. ಅದಕ್ಕೆ ಅವರ ವಚನಗಳೇ ಸಾಕ್ಷಿ ಮತ್ತು ಸ್ಫೂರ್ತಿ.

**ಆಕರಗಳು:**

***ಜನಪದ ತ್ರಿಪದಿಗಳು***, *೨೦೧೦ರ ದಿನದರ್ಶಿ, ಸಿದ್ಧಗಂಗಾ ವಿದ್ಯಾಸಂಸ್ಥೆ, ತುಮಕೂರು.*

***ಜನಪದ ಸಾಹಿತ್ಯ***, *ಡಾ. ಕಾಳೇಗೌಡ ನಾಗವಾರ, ಯುಗಾದಿ ಪ್ರಕಾಶನ, ಬೆಂಗಳೂರು.*

***ನಿಷ್ಪತ್ತಿ***, *ಅಕ್ಕ ಅನ್ನಪೂರ್ಣತಾಯಿ, ಬಸವ ಸಂಪದ ಪ್ರಕಾಶನ, ಬೀದರ.*

***ಬಸವ ವಿಚಾರಧಾರೆ***, *ದೇಜಗೌ, ಶ್ರೀ ಶಿವರಾತ್ರೀಶ್ವರ ಗ್ರಂಥ ಮಾಲೆ, ಮೈಸೂರು.*